**ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಬೆಂಗಳೂರು. ನಿರ್ದೇಶಕರ ನಡವಳಿಗಳು**

**ನೇರ ಸಂದರ್ಶನದ ಮೂಲಕ ಸಹಾಯಕ ಪ್ರಾಧ್ಯಾಪಕರು ಮತ್ತು ಸಹಾಯಕ ಶಸ್ತ್ರ ಚಿಕಿತ್ಸಕರ ಹುದ್ದೆಗಳನ್ನು ತುಂಬುವ ಸಲುವಾಗಿ ನಿರ್ದೇಶಕರ ಕೊಠಡಿ ಯಲ್ಲಿ ಹಮ್ಮಿಕೊಳ್ಳಲಾದದಿನಾಂಕ 30.05.2012 ರಂದು ಮದ್ಯಾಹ್ನ 12.00 ಗಂಟೆಗೆ ನಡೆದ ಸಭೆಯ ನಡವಳಿಗಳು**

---

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು ಗೌರವ ಸಮಿತಿ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಬೆಂಗಳೂರು ಮತ್ತು ಸರ್ಕಾರದ ಪ್ರಧಾನಕಾರ್ಯದರ್ಶಿ ಗಳೊಂದಿಗೆ ಸಂಸ್ಥೆಯ ನಿರ್ದೇಶಕ ರು ಚರ್ಚಿಸಿದಂತೆ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಬೆಂಗಳೂರು ಇಲ್ಲಿ ಖಾಲಿ ಇರುವ ವೈದ್ಯಕೀಯ ಹಾಗೂ ತಾಂತ್ರಿಕ ಹುದ್ದೆ ಗಳನ್ನು ನಿಯಮಾನುಸಾರ ನೇಮಕಾತಿ ಮಾಡಿಕೊಳ್ಳಲು ದಿನಾಂಕ 24.03.2012 ರಲ್ಲಿ ಅನುಮತಿ ಕೋರಲಾಗಿತ್ತು. ಅದರಂತೆ ಕಂಡಿಕೆ 10 ರಲ್ಲಿ ಮಾನ್ಯ ವೈದ್ಯಕೀಯ ಸಚಿವರು ನಿಯಮಾನುಸಾರ ಹುದ್ದೆಗಳನ್ನು ತುಂಬಲು ಅನುಮತಿ ನೀಡಿರುತ್ತಾರೆ. ನಂತರ ನಿರ್ದೇಶಕರು, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು ಗೌರವ ಸಮಿತಿ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಬೆಂಗಳೂರು ಇವರ ಆದೇಶದ ಮೇರೆಗೆ ಸಂಸ್ಥೆಯಲ್ಲಿನ ಸಹಾಯಕ ಪ್ರಾಧ್ಯಾಪಕರು ಹಾಗೂ ಸಹಾಯಕ ಶಸ್ತ್ರ ಚಿಕಿತ್ಸಕರ ಹುದ್ದೆಗಳ ನೇಮಕವನ್ನು ನೇರ ಸಂದರ್ಶನದ ಮೂಲಕ ಭರ್ತಿ ಮಾಡಿಕೊಳ್ಳಲು ಕೈಗೊಳ್ಳಬೇಕಾದ ಪ್ರಕ್ರಿಯೆಗಳನ್ನು ಕುರಿತು ವಹಿಸಬೇಕಾದ ಕ್ರಮಗಳನ್ನು ಕುರಿತಾಗಿ ಚರ್ಚಿಸಲಾಯಿತ್ತು.

ಮೊದಲಿಗೆ ಖಾಲಿ ಹುದ್ದೆಗಳ ಸಂಖ್ಯೆ ಗೆ ಅನುಗುಣವಾಗಿ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ (1) ಸಿಆಸುಇ/16/ಸೆನೆನಿ/2008, ದಿನಾಂಕ 01.09.2008, (2) ಸಿಆಸುಇ/01/ಸೆಹಿಮ 2011, ದಿನಾಂಕ 09.03.2011 (3) ಸಿಆಸುಇ/53/ಸೆನೆನಿ/2007, ದಿನಾಂಕ 04.01.2008, ಪರಿಶೀಲಿಸಿ, ಕೆಳಕಂಡಂತೆ ಮೀಸಲಾತಿಯನ್ನು ನಿಗದಿಸಲಾಗಿದೆ.

ಸಂಸ್ಥೆಯಲ್ಲಿ ಹಾಲಿ ಈಗ 65 ಸಹಾಯಕ ಪ್ರಾಧ್ಯಾಪಕರ ಮಂಜೂರಾದ ಹುದ್ದೆ ಗಳು ಇದ್ದು, ಇದರಲ್ಲಿ 38 ಹುದ್ದೆಗಳು ಖಾಲಿಇರುತ್ತವೆ. ( ಅದ್ಯಾಗ್ಯೂ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರಿಗೆ ಅನುಮತಿ ಕೋರಲಾದ ಸಮಯದಲ್ಲಿ 39 ಹುದ್ದೆಗಳು ಎಂದು ತೋರಿಸಲಾಗಿರುತ್ತದೆ. ಇದರಲ್ಲಿ ಡಾ: ಮಧುಮತಿ ಡಿ.ಎಸ್. ಇವರು ಸಹಾಯಕ ಪ್ರಾಧ್ಯಾಪಕರು, ಪೆಥಾಲಜಿ ಹುದ್ದೆಗೆ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಅಂತೆಯೇ ಸಹಾಯಕ ಪ್ರಾಧ್ಯಾಪಕರುಗಳ ಒಟ್ಟು ಸಂಖ್ಯೆ 38 ಆಗಿರುತ್ತದೆ). ಈ ಬದಲಾವಣೆಯನ್ನು ಸಭೆಯಲ್ಲಿ ಚರ್ಚಿಸಲಾಗಿರುತ್ತದೆ.

ಈ 38 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಲ್ಲಿ ಮೇಲೆ ತಿಳಿಸಿದ ಸರ್ಕಾರದ ಆದೇಶಗಳನ್ವಯ ನೇರ ಮೀಸಲಾತಿಯನ್ನು ವಿಂಗಡಿಸಕೊಳ್ಳಬೇಕಾಗಿರುತ್ತದೆ.

ಮಂಜೂರಾದ 65 ಹುದ್ದೆಗಳಿಗೆ ಸರ್ಕಾರದ ಆದೇಶದ ಅನ್ವಯ ನೇರ ಮೀಸಲಾತಿಯನ್ನು GM = 32, SC=10, ST=2, Category-1 = 03, Category-IIA = 10, , Category-IIB = 03, , Category-IIIA = 02 ಹಾಗೂ Category-IIIB = 03 ರತೆ ಒಟ್ಟು 65 ಹುದ್ದೆ ಗಳನ್ನು ಮಿಗಡಿಸಬೇಕಾಗಿರುತ್ತದೆ. ಇದರಲ್ಲಿ GM ಪ್ರವರ್ಗದಲ್ಲಿ 16 ಸಹಾಯಕ ಪ್ರಾಧ್ಯಾಪಕರು ನೇಮಕಾತಿ ಹೊಂದಿದ್ದು, ಇದರಲ್ಲಿ 16 ಹುದ್ದೆಗಳು ( 32-16 = 16) ಬಾಕಿ ಇರುತ್ತದೆ. SC ಪ್ರವರ್ಗದಲ್ಲಿ 10 ಸಹಾಯಕ ಪ್ರಾಧ್ಯಾಪಕರು ಈಗಾಗಲೇ ನೇಮಕಾತಿ ಹೊಂದಿದ್ದು, ಇದರಲ್ಲಿ ಯಾವುದೇ ಹುದ್ದೆ ( 10-10 = 0) ಬಾಕಿ ಇರುವುದಿಲ್ಲ. ST ಪವರ್ಗದಲ್ಲಿ 01 ಸಹಾಯಕ ಪ್ರಾಧ್ಯಾಪಕರು ನೇಮಕಾತಿ ಹೊಂದಿದ್ದು

Contd..2

ಇದರಲ್ಲಿ 01 ಹುದ್ದೆ ( 02-01 = 01) ಬಾಕಿ ಇರುತ್ತದೆ. Category-I ಪ್ರವರ್ಗದಲ್ಲಿ ಯಾವುದೇ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಹೊಂದಿರುವುದಿಲ್ಲ. ಅಂತೆಯೇ ( 03-0 = 03) 3 ಹುದ್ದೆಗಳು ಬಾಕಿ ಇರುತ್ತದೆ. Category - IIA ಪ್ರವರ್ಗದಲ್ಲಿ ಯಾವುದೇ ಸಹಾಯಕ ಪ್ರಾಧ್ಯಾಪಕರು ನೇಮಕಾತಿ ಹೊಂದಿರುವುದಿಲ್ಲ. ಅಂತೆಯೇ ( 10-0=10) 10 ಹುದ್ದೆಗಳು ಬಾಕಿ ಇರುತ್ತದೆ. Category - IIB ಪ್ರವರ್ಗದಲ್ಲಿ ಯಾವುದೇ ಸಿಬ್ಬಂದಿ ನೇಮಕಾತಿ ಹೊಂದಿರುವುದಿಲ್ಲ. ಅಂತೆಯೇ (03-0=03) 0 ಹುದ್ದೆಗಳು ಬಾಕಿ ಇರುತ್ತದೆ. ಪ್ರವರ್ಗ IIIA ರಲ್ಲಿಯಾವುದೇ ಸಹಾಯಕ ಪ್ರಾಧ್ಯಾಪಕರ ಹುದ್ದೆ ನೇಮಕಾತಿ ಹೊಂದಿರುವುದಿಲ್ಲ. ಅಂತೆಯೇ (02-0=02) 2 ಹುದ್ದೆಗಳು ಬಾಕಿ ಇರುತ್ತದೆ. Category -III-B ಪ್ರವರ್ಗದಲ್ಲಿ ಯಾವುದೇ ಸಹಾಯಕ ಪ್ರಾಧ್ಯಾಪಕರ ಹುದ್ದೆ ನೇಮಕಾತಿ ಹೊಂದಿರುವುದಿಲ್ಲ. ಅಂತೆಯೇ ( 03-03=03) 03 ಹುದ್ದೆಗಳು ಬಾಕಿ ಇರುತ್ತದೆ. ಇದಕ್ಕೆ ಅನುಗುಣವಾಗಿ ಸಹಾಯಕ ಪ್ರಾಧ್ಯಾಪಕರ Vertical ಹಾಗೂ Horizontal ಮೀಸಲಾತಿಯನ್ನು ಈ ಕೆಳಕಂಡಂತೆ ನಿಗದಿಸಬೇಕಾಗಿರುತ್ತದೆ.

**Assistant Professor: (Vertical Reservation)**

| No. of Posts Sanctioned | Vacant | ST | Category -I | Category IIA | Category IIB | Category IIIA | Category IIIB | GM |
|---|---|---|---|---|---|---|---|---|
| 65 | 38 | 01 | 03 | 10 | 03 | 02 | 03 | 16 |

**Assistant Professor: ( Horizontal Reservation)**

| ST -01 | Category-I - 03 | Category -IIA - 10 | Category IIB - 03 | Category IIIA - 02 | Category IIIB - 03 | GM - 16 |
|---|---|---|---|---|---|---|
| GM- 01 | GM - 01<br>Women -01<br>Rural - 01 | GM - 02<br>Women - 03<br>Ex. Service Man -01<br>Physically Handicap - 01<br>Rural - 03 | GM - 01<br>Women -01<br>Rural - 01 | GM - 01<br>Women -01 | GM - 01<br>Women -01<br>Rural - 01 | GM - 03<br>Women -05<br>Rural - 05<br>Physically Handicap-01<br>Ex- Service man - 01<br>Kannada Medium -01 |

ಮಂಜೂರಾದ 17 ಸಹಾಯಕ ಶಸ್ತ್ರ ಚಿಕಿತ್ಸಕರ ಹುದ್ದೆಗಳಲ್ಲಿ 07 ಹುದೆಗಳು ಖಾಲಿ ಇರುತ್ತದೆ. (ಡಾ: ಮಧುಮತಿ ಇವರು ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಕರ್ತವ್ಯಕ್ಕೆ ಹಾಜರಾದ ನಿಮಿತ್ತ ಸಹಾುಕ ಶಸ್ತ್ರ ಚಿಕಿತ್ಸಕರ 01 ಹುದ್ದೆ ಖಾಲಿ ಆ ಗಿರುತ್ತದೆ). ಈ ಬದಲಾವಣೆಯನ್ನು ಸಭೆಯಲ್ಲಿ ಚರ್ಚಿಸಲಾಗಿದೆ.

ಈ 07 ಸಹಾಯಕ ಶಸ್ತ್ರ ಚಿಕಿತ್ಸಕರಲ್ಲಿ ಸರ್ಕಾರದ ಆದೇಶದನ್ವಯ ನೇರ ಮೀಸಲಾತಿಯನ್ನು ಈ ಕೆಳಕಂಡಂತೆ ನಿಗದಿಸಬೇಕಾಗಿರುತ್ತದೆ.

Contd..3

ಮಂಜೂರಾದ 17 ಸಹಾಯಕ ಶಸ್ತ್ರ ಚಿಕಿತ್ಸಕರ ಹುದ್ದೆಗಳಿಗೆ ಸರ್ಕಾರದ ಆದೇಶದನ್ವಯ ನೇರ ಮೀಸಲಾತಿಯನ್ನು GM-08, SC-03, ST-01, Category-I = 01, Category -IIA=-02, Category -IIB=-01, Category -IIIA=-01 ರಂತೆ ಒಟ್ಟು 17 ಹುದ್ದೆಗಳನ್ನು ವಿಂಗಡಿಸಬೇಕಾಗಿರುತ್ತದೆ. ಇದರಲ್ಲಿ GM ಪ್ರವರ್ಗದಲ್ಲಿ 06 ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದು, 02 ಹುದ್ದೆಗಳು (08-06 = 02) ಬಾಕಿ ಇರುತ್ತದೆ, SC ಪ್ರವರ್ಗದಲ್ಲಿ 04 ಸಿಬ್ಬದಿ ಕರ್ತವ್ಯ ನಿರ್ವಹಿಸುತ್ತಿದ್ದು, ಯಾವುದೇ ಹುದ್ದೆ (03-04=1) ಬಾಕಿ ಇರುವುದಿಲ್ಲ. ST ಪ್ರವರ್ಗದಲ್ಲಿ ಯಾವುದೇ ಸಿಬ್ಬಂದಿ ಕರ್ತವ್ಯದಲ್ಲಿ ಇರುವುದಿಲ್ಲ. ಅತೆಯೇ (01 -0) 1 ಹುದ್ದೆ ಬಾಕಿ ಇರುತ್ತದೆ. Category-I ಪ್ರವರ್ಗದಲ್ಲಿ ಯಾವುದೇ ಸಿಬ್ಬಂದಿ ಕರ್ತವ್ಯದಲ್ಲಿ ಇರುವುದಿಲ್ಲ. ಅಂತೆಯೇ (01-0=01) 1 ಹುದ್ದೆ ಬಾಕಿ ಇರುತ್ತದೆ. Category-IIA ಪ್ರವರ್ಗದಲ್ಲಿ ಯಾವುದೇ ಸಿಬ್ಬಂದಿ ಕರ್ತವ್ಯದಲ್ಲಿ ಇರುವುದಿಲ್ಲ ಅಂತೆಯೇ (02-0=02) 2 ಹುದ್ದೆಗಳು ಬಾಕಿ ಇರುತ್ತದೆ. Category -IIB, ಪ್ರವರ್ಗದಲ್ಲಿ ಯಾವುದೇ ಸಿಬ್ಬಂದಿ ಕರ್ತವ್ಯದಲ್ಲಿ ಇರುವುದಿಲ್ಲ ಅಂತೆಯೇ (01 -0-01) 01 ಹುದ್ದೆ ಬಾಕಿ ಇರುತ್ತದೆ. ಇದಕ್ಕೆ ಅನುಗುಣವಾಗಿ ಸಹಾಯಕ ಶಸ್ತ್ರ ಚಿಕಿತ್ಸಕರ Vertical ಮತ್ತು Horizontal ಮೀಸಲಾತಿಯನ್ನು ಈ ಕೆಳಕಂಡಂತೆ ನಿಗಧಿಸಬೇಕಾಗಿರುತ್ತದೆ.

**Assistant Surgeons: (Vertical Reservation)**

| No. of Posts Sanctioned | Vacant | ST | Category-I | Category-IIA | Category -IIB | GM |
|---|---|---|---|---|---|---|
| 17 | 07 | 01 | 01 | 02 | 01 | 02 |

**Assistant Surgeon: ( Horizontal Reservation)**

| ST -01 | Category -I -01 | Category IIA - 02 | Category IIB - 01 | GM - 02 |
|---|---|---|---|---|
| GM- 01 | GM - 01 | GM - 01<br>Women - 01 | GM - 01 | GM - 01<br>Women -01 |

ಸರ್ಕಾರದಲ್ಲಿ ಪರಿಶಿಷ್ಠ ಜಾತಿ / ಪರಿಶಿಷ್ಠ ವರ್ಗಕ್ಕೆ ಸಂಬಂಧಪಟ್ಟ ಎಲ್ಲಾ ಮಿಸಲಾತಿಯನ್ನು ಹಿಂದಿನ ನೇಮಕಾತಿಗಳಲ್ಲಿ ಪರಿಗಣಿಸಲಾಗಿರುತ್ತದೆ.

ಸಹಾಯಕ ಪ್ರಾಧ್ಯಾಪಕರ ನೇಮಕಕ್ಕೆ ಸಂಬಂಧಪಟ್ಟಂತೆ ವಯೋ ಮಿತಿ ಹಾಗೂ ಮೋಮಿತಿಯಲ್ಲಿ ನೀಡಬಹುದಾದ ವಿನಾಯತಿಯ ಬಗ್ಗೆ ಕರ್ನಾಟಕ ರಾಜ್ಯ ಸರ್ಕಾರದ ನೇಮಕಾತಿ ನಿಯಮ ದಲ್ಲಿ ತಿಳಿಸಿರುವಂತೆ ನಿ ಗಧಿಪಡಿಸಬೇಕಿದೆ. ಕೆಲವು ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಉನ್ನತ ಶಿಕ್ಷಣದ ( Super Specialty) ಪಧವಿ ಪಡೆದಿರುವ

Contd..4

ಅಭ್ಯರ್ಥಿಗಳ ಲಭ್ಯವಿರುವ ಸಾಧ್ಯತೆ / ಖಡಾಖಂಡಿ ಇರುವುದರಿಂದ, ಈ ಉನ್ನತ ಶಿಕ್ಷ ಣದ ( Super Specialty) ಪಧವಿ ಪಡೆಯಲು ಮೂರು ವರ್ಷಗಳ ಕಾಲ ವ್ಯಾಸ ಗ ಮಾಡಬೇಕಾದ ಅವಶ್ಯಕತೆ ಇರುವುದರಿಂದ ವಯೋಮಿತಿ ಹಾ ಗೂ ವಯೋಮಿತಿಯ ವಿನಾಯಿತಿಯಲ್ಲಿ ಉನ್ನತ ಶಿಕ್ಷಣದ ( Super Specialty) ಪಧವಿದರರಿಗೆ ಮೂರು ವರ್ಷ ಹೆಚ್ಚಿನ ವಿನಾಯಿತಿ ನೀಡಬಹುದಾಗಿ ನಿರ್ಧರಿಸಲಾಗಿರುತ್ತದೆ.

ಅಲ್ಲದೆ 1977ರ ಕರ್ನಾಟಕ ನಾಗರಿಕ ಸೇವಾ ( General Recruitment) ನಿಯಮಾವಳಿಯ ನಿಯಮ 6 ಉಪನಿಯಮ (3) ರಲ್ಲಿನಂತೆ ವಯೋಮಿತಿಯನ್ನು ಅನುಸರಿಸಲಾಗುವುದು.

ನಂತರ ಸಂದರ್ಶನ ಸಮಿತಿ ನೀಡಬೇಕಾದ ಅಂಕಗಳ ಬಗ್ಗೆ ಯಾವ ಮಾನದಂಡ (Criteria) ಅ ನುಸರಿಸಬೇಕೆಂಬುದಾಗಿ ಚರ್ಚಿಸಲಾಯಿತು ಹಾಗೂ ಅದರಂತೆ ಈ ಕೆಳಕಂಡಂತೆ ಅಂಶಗಳನ್ನು ನಿಗಧಿಸಲಾಗಿದೆ.

**Assistant Professor:**

| Gold medal MBBS/PG Maximum Marks 2 1 mark for 1 medal | Experience in The Specialty in MCI recognized Institutions for 6 months 1/2 mark Maximum-2 | Paper Publications National / International Maximum 2 Marks 1/2 mark for 1 paper | Paper Presentation National / International Conference Maximum 2 Marks ½ mark for 1 paper | Extra Curricular Activity **Sports:** a) State - ½ marks b) National -1 marks c)International - 2 marks Maximum - 2 | Average of all internals maximum 2 marks | External Expert Maximum 3 marks |
|---|---|---|---|---|---|---|
| | | | | | | |

**Assistant Surgeons:**

| Diploma Holders maximum 5 marks | M.B.B.S. Medals Maximum 2 marks | Extra curricular Activity Sports Maximum 2 marks | Paper Publication Maximum 2 Marks | Paper Presentation Maximum 2 marks | Experience Maximum 2 marks | Average of all Internals Maximum 5 marks |
|---|---|---|---|---|---|---|
| | | | | | | |

Contd.5

ಮೇಲ್ಕಂಡ ಹುದ್ದೆಗಳ ವಿದ್ಯಾರ್ಹತೆ ಹಾಗೂ ವೃಂದ ಮತ್ತು ನೇಮಕಾತಿ ಬಗ್ಗೆ MCI regulations 1998 and C & R Rules of Institute 2006, ನಿಗದಿಪಡಿಸಿರುವ ಮಾನದಂಡಗಳನ್ನು ಅನುಸರಿಸಿ ಪ್ರಕಟಣೆಯನ್ನು ಹೊರಡಿಸಲು ನಿರ್ಧರಿಸಿದ್ದು, 1) ರಾಷ್ಟ್ರೀಯ ದಿನ ಪತ್ರಿಕೆ ಇಂಡಿಯನ್ ಎಕ್ಸ್‌ಪ್ರೆಸ್ ಹಾಗೂ ಕನ್ನಡ ಪ್ರಭ ದಿನಪತ್ರಿಕೆ ( ಕರ್ನಾಟಕ ) ಯಲ್ಲಿ ಪ್ರಕಟಣೆ ನೀಡಲಾಗಿರುತ್ತದೆ, ಹಾಗೂ Website ನಲ್ಲಿಯು ಸಹ ವಿವರವಾದ ಮಾಹಿತಿಯನ್ನು ಅಳವಡಿಸಲು ತಿಳಿಸಲಾಗಿದೆ, ಹಾಗೂ ಸುದರ್ಶನದ ದಿನ ಸಂದರ್ಶನದ ಪ್ರಕ್ರಿಯೆ ನಿಯಮಾನುಸಾರ ಸುಗಮವಾಗಿ ನಡೆಸಲು ಆಡಳಿತ ವಿಭಾಗದ ಸಿಬ್ಬಂದಿಗೆ ಸೂಕ್ತ ರೀತಿಯಲ್ಲಿ ಸಿದ್ಧತೆ ನಡೆಸಲು ಕ್ರಮವಹಿಸಬೇಕೆಂದು ನಿರ್ಧರಿಸಲಾಗಿರುತ್ತದೆ.

**ಮುಖ್ಯ ಆಡಳಿತಾಧಿಕಾರಿಗಳು** **ವೈದ್ಯಕೀಯ ಅದೀಕ್ಷಕರು,** **ನಿರ್ದೇಶಕರು.**